**ಸಾಕ್ಷಿಗೆ ಇಂದು ದಿನಾಂಕ :- 01.07.2023 ರಂದು ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

4. ಆ ದಿನ ಮಾಡಲಾದ ಮಹಜರ ನೊಡುತ್ತಿದ್ದು, ಅದು ನಿ.ಪಿ.2 ಎಂದು, ಸಾಕ್ಷಿಯ ರುಜು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಮಹಜರ ಕಾಲಕ್ಕೆ ತೆಗೆಯಲಾದ ಪೊಟೋ ನೊಡುತ್ತಿದ್ದು, ಆ ಬಗ್ಗೆ ತನಿಖಾಧಿಕಾರಿ ಸಿ.ಡಿ. ಹಾಜರುಪಡಿಸಿದ್ದು, ಆ ಪೋಟೋ ನಿ.ಪಿ.3 ಎಂದು, ಆ ಪೋಟೋಗೆ ಸಂಬಂಧಪಟ್ಟ ಸಿ.ಡಿ.ಯನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೋಲೀಸರು ಗಸಗಸೆ ಪೌಡರ ತುಂಬಿದ್ದ 07 ಚೀಲಗಳನ್ನು ಮತ್ತು ಕೆ.ಎ.22/ಬಿ-4520 ಕ್ರೂಜರ ವಾಹನ ವಶಪಡಿಸಿಕೊಂಡರು. ಪೋಲೀಸರು ಮೊದಲನೇ ಬ್ಯಾಗಿನಿಂದ 500 ಗ್ರಾಂ ಗಸಗಸೆ ಪೌಡರ ಸ್ಯಾಂಪಲ್ ಕುರಿತು ಪಡೆದುಕೊಂಡು ಪ್ಯಾಕ್ ಮಾಡಿದರು. ಪಂಚನಾಮೆ ರಾತ್ರಿ 8.00 ಘಂಟೆಯವರೆಗೆ ಮಾಡಿದರು. ಆ ದಿನ ಪೋಲೀಸರು ತೆಗೆದುಕೊಂಡ ಸ್ಯಾಂಪಲ ಗಸಗಸೆ ಪೌಡರ ನೋಡುತ್ತಿದ್ದು, ಅದು ಎಂ.ಓ.1 ಎಂದು ಗುರುತಿಸಲಾಯಿತು. ಆ ದಿನ ಅಮಾನತುಪಡಿಸಿಕೊಂಡ ಕ್ರೂಜರ ವಾಹನ ನೋಡಿದರೆ ಗುರುತಿಸುತ್ತೇನೆ. ಅಲ್ಲಿ ಹಿಡಿದುಕೊಂಡವರ ಪೈಕಿ ಒಬ್ಬ

ವ್ಯಕ್ತಿಯನ್ನು ಈ ದಿನ ನ್ಯಾಯಾಲಯದಲ್ಲಿ ಇದ್ದು, ಆತನನ್ನು ಗುರುತಿಸುತ್ತೇನೆ. ಆತ ಈ ಪ್ರಕರಣದ 1ನೇ ಆರೋಪಿ ಸೋಮು ಆಗಿದ್ದಾನೆ. ಇನ್ನೊಬ್ಬನಿಗೆ ಐದು ವರ್ಷಗಳಾಗಿದ್ದರಿಂದ ಗುರುತಿಸಲು ಆಗುವುದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು **ಭಾಗಶಃ** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**<u>ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ</u>**

**5.** ಆ ದಿನ ಅಮಾನತುಪಡಿಸಿಕೊಳ್ಳಲಾದ 1ನೇ ಚೀಲ 24 ಕೆ.ಜಿ. 500 ಗ್ರಾಂ, 2ನೇ ಚೀಲ 13 ಕೆ.ಜಿ. 500 ಗ್ರಾಂ ಆಗಿತ್ತು, 3 ನೇ ಚೀಲ 09 ಕೆ.ಜಿ. 250 ಗ್ರಾಂ ಆಗಿತ್ತು, ಆ ದಿನ ತೂಕ ಮಾಡಲಾದ 5ನೇ ಚೀಲ 25 ಕೆ.ಜಿ. 250 ಗ್ರಾಂ ಆಗಿತ್ತು, ಆ ದಿನ ತೂಕ ಮಾಡಲಾದ 6ನೇ ಚೀಲ 24 ಕೆ.ಜಿ.ಆಗಿತ್ತು ಎಂದರೆ ಸರಿ. ಆ ಕ್ರೂಜರ ವಾಹನ ಕೆ.ಎ.-22/ಪಿ.-4542 ಆಗಿತ್ತು ಎಂದರೆ ಸರಿಯಲ್ಲ. ಆ ಜೀಪ ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ನಿ.ಪಿ.3 ಪೊಟೋದಲ್ಲಿ ಕ್ರೂಜರ ವಾಹನ ಇದೆ ಅದರ ನಂ. ಕೆ.ಎ.22/ಪಿ-4542 ಎಂದು ಇದೆ ಎಂದರೆ ಸರಿ. ಆ ದಿನ ಅಲ್ಲಿ 2ನೇ ಆರೋಪಿ ಸಹ ಇದ್ದ ಹಾಗೂ ಆತನ ಹೆಸರು ಸುನೀಲ ತಂ.ಕೇಸು ಪವಾರ ಅಂತಾ ಹೇಳಿದ್ದಾನೆ ಎಂದರೆ ಸರಿ. ಪೋಲೀಸರು ನನಗೆ ನೋಟಿಸ್ ಜಾರಿ ಮಾಡಿದ್ದರು ಎಂದರೆ ಸರಿ.

**<u>ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ವಕೀಲರಿಂದ ಆರೋಪಿತರ ಪರ</u>**

**6.** ನಮ್ಮ ಆಫೀಸು ಠಾಣೆಯಿಂದ **½** ಕಿ.ಮೀ. ದೂರವಿದೆ. ನಮ್ಮ ಕಛೇರಿ ವೇಳೆ ಬೆಳಿಗ್ಗೆ **10.15** ರಿಂದ ಸಂಜೆ **5.30** ಘಂಟೆ ಇದೆ. ಚಾ.ಸಾ.**2** ರವರ ಕಛೇರಿ ನಮ್ಮ ಕಛೇರಿಯಿಂದ **½** ಕಿ.ಮೀ. ದೂರದಲ್ಲಿದೆ. ನಮ್ಮ ಕಛೇರಿಯಿಂದ ಹೊರಗಡೆ

ಹೋಗಬೇಕಾದರೆ ಬುಕ್ಕಿನಲ್ಲಿ ಎಂಟ್ರಿ ಮಾಡಬೇಕಾಗುತ್ತದೆ ಎಂದರೆ ಸರಿ. ನಾವು ಕರ್ತವ್ಯದ ವೇಳೆಯಲ್ಲಿ ಕಛೇರಿಯಿಂದ ಹೋಗಬೇಕಾದರೆ ಮೇಲಾಧಿಕಾರಿಗಳ ಅನುಮತಿ ಪಡೆಯಬೇಕು ಎಂದರೆ ಸರಿ. ಆ ದಿನ ಪೋಲೀಸರು ನಮ್ಮ ಕಛೇರಿಗೆ ಬಂದಾಗ ಸಮಯ ಸಂಜೆ 5.15 ಘಂಟೆಯಾಗಿತ್ತು. ಪೋಲೀಸರು ನಮ್ಮ ಕಛೇರಿಗೆ ಬಂದಾಗ ನಮ್ಮ ಆಫಿಸ್ ಹೊರಬದಿಯಲ್ಲಿ ನಿಂತಿದ್ದೆ. ನಮ್ಮ ಕಛೇರಿಯಲ್ಲಿ ಇನವರ್ಡ ಔಟವರ್ಡ ರಜಿಸ್ಟರ ಇಟ್ಟಿದ್ದೇವೆ. ನಮ್ಮ ಇಲಾಖೆಗೆ ಯಾವುದೇ ನೊಟಿಸ್ ಬಂದರೆ ಅದು ಇನವರ್ಡ ಬುಕ್ಕಿನಲ್ಲಿ ಬರೆದು ಅದಕ್ಕೆ ಇನವರ್ಡ ನಂಬರ ಕೊಡುತ್ತೇವೆ ಎಂದರೆ ಸರಿ. ನಿಮಗೆ ಕೊಡಲಾದ ನೋಟೀಸಿಗೆ ಇನವರ್ಡ ನಂಬರ ಇಲ್ಲ ಎಂದರೆ ಸಾಕ್ಷಿಯು ತಮಗೆ ನೊಟೀಸ್ ಠಾಣೆಯಲ್ಲಿ ಜಾರಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಪೋಲೀಸರು ನನಗೆ ಕಛೇರಿಯಲ್ಲಿ ನೋಟೀಸ್ ಜಾರಿ ಮಾಡಿರುವುದಿಲ್ಲ. ನಾನು ನೋಟೀಸ್ ಮೇಲೆ ರುಜು ಮಾಡಿದ ಜಾಗದಲ್ಲಿ ದಿನಾಂಕ ಹಾಕಿಲ್ಲವೆಂದರೆ ಸರಿ. ನನಗೆ ಹಿರಣ್ಣಿ ಎಂಬ ಪೋಲೀಸರು ಕರೆಯಲು ನಮ್ಮ ಕಛೇರಿಗೆ ಬಂದಿದ್ದರು. ಠಾಣೆಗೆ ಪೋಲೀಸರು ಕರೆಯಲು ಬಂದಾಗ ನಾನು ಮತ್ತು ಚಾ.ಸಾ.2 ಬಂದಿದ್ದೆವು. ಚಾ.ಸಾ.2 ರವರಿಗೆ ಪೋಲೀಸರೇ ಕರೆದುಕೊಂಡು ಬಂದಿದ್ದರು. ನಾವು ಠಾಣೆಗೆ ಬಂದಾಗ ಸಮಯ ಸಂಜೆ 5.20 ಘಂಟೆಯಾಗಿತ್ತು. ಆ ದಿನ ನಾವು ನಮ್ಮ ಮೇಲಾಧಿಕಾರಿಗಳಿಗೆ ಮೌಖಿಕವಾಗಿ ಹೇಳಿಕೊಂಡು ಹೋಗಿದ್ದೆ. ನಾನು ಪೋಲೀಸ ಠಾಣೆಗೆ

ಹೋಗಬೇಕಾದರೆ ನಮ್ಮ ಕಛೇರಿಯ ಮೂವಮೆಂಟ ರಜಿಸ್ಟರಿನಲ್ಲಿ ನಮೂದಿಸಿಲ್ಲ. ನಾವು ಪೋಲೀಸ ಠಾಣೆಗೆ ಹೋದ ನಂತರ ಅಲ್ಲಿ 15 ನಿಮಿಷ ಇದ್ದೆವು. ಆ ದಿನ ಠಾಣೆಯಿಂದ 04 ಜನ ಪೋಲೀಸರು, ಪಿ.ಎಸ್.ಐ., ನಾನು ಮತ್ತು ಚಾ.ಸಾ.2 ಹೋಗಿದ್ದೆವು. ಒಬ್ಬ ಡಾಕ್ಟರ ತಮ್ಮ ವಾಹನದ ಮೇಲೆ ಬಂದಿದ್ದರು. ನಾನು ಠಾಣೆಗೆ ಹೋದ ನಂತರ ಪೋಲೀಸರು ನನಗೆ ಅವರನ್ನಾಗಲಿ ಅಥವಾ ಅವರ ವಾಹನ ತಪಾಸಣೆ ಮಾಡಲು ಹೇಳಿಲ್ಲ. ಚಡಚಣಗೆ ಧುಮಕನಾಳದಿಂದ ಹೋಗಬೇಕಾದರೆ 02 ದಾರಿಗಳೆಂದರೆ ಸರಿ. 1 ನೇ ದಾರಿ ಚಡಚಣದಿಂದ ಬರಡೋಲ, ಬರಡೋಲದಿಂದ ದೇವರ ನಿಂಬರಗಿ ಹಾಗೂ ಅಲ್ಲಿಂದ ಧುಮಕನಾಳ ಎಂದರೆ ಸರಿ. 2 ನೇ ದಾರಿ ಎಂದರೆ ಚಡಚಣದಿಂದ ಜೇರಂಕಲಗಿ, ಅಲ್ಲಿಂದ ದೇವರ ನಿಂಬರಗಿ ಹಾಗೂ ಅಲ್ಲಿಂದ ಧುಮಕನಾಳ ಅಂದರೆ ಸರಿ.

(ಈಗ ವಿರಾಮದ ವೇಳೆಯಾಗಿದ್ದರಿಂದ ಮುಂದುವರೆದ ಪಾಟಿ ಸವಾಲಿಗಾಗಿ ಮಧ್ಯಾಹ್ನ 2.30 ಘಂಟೆಗೆ ಮುಂದೂಡಲಾಯಿತು).

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯಪುರ.

**ಸಾಕ್ಷಿಗೆ ಮಧ್ಯಾಹ್ನ 3.35 ಘಂಟೆಗೆ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ವಕೀಲರಿಂದ ಆರೋಪಿತರ ಪರ**

**7.** ಆ ದಿನ ನಾವು ಚಡಚಣದಿಂದ ಬರಡೋಲ ಮಾರ್ಗವಾಗಿ ಧುಮಕನಾಳಗೆ ಹೋದೆವು. ಚಡಚಣದಿಂದ ಧುಮಕನಾಳ 25 ಕಿ.ಮೀ. ದೂರವಿದೆ ಎಂದರೆ ಸಾಕ್ಷಿಯು 21 ಕಿ.ಮೀ. ದೂರದಲ್ಲಿದೆ ಎಂದು ನುಡಿಯುತ್ತಾರೆ. ಬರಡೋಲದಿಂದ ಧುಮಕನಾಳವರೆಗೆ ರಸ್ತೆ ಕಚ್ಚಾ ರಸ್ತೆಯಾಗಿದೆ. ಚಡಚಣದಿಂದ ಧುಮಕನಾಳಗೆ ಹೋಗಬೇಕಾದರೆ 50 ನಿಮಿಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ 20-25 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ಆ ದಿನ ನೀವು ಗುನ್ನಾ ಸ್ಥಳಕ್ಕೆ ಹೋಗುವ ದಾರಿಯಲ್ಲಿ ಎಲ್ಲಿಯಾದರೂ ನಿಲ್ಲುವುದಾಯಿತಾ ಎಂದರೆ ಸಾಕ್ಷಿಯು ಆ ಸ್ಥಳದಿಂದ ½ ಕಿ.ಮೀ. ಪೂರ್ವದಲ್ಲಿ ನಿಂತು 05 ನಿಮಿಷ ಮಾತನಾಡಿದೆವು ಎಂದು ನುಡಿಯುತ್ತಾರೆ. ಆ ದಿನ ನಾವು ಚಡಚಣ ಬಿಟ್ಟ ನಂತರ ಆ ಸ್ಥಳದ ದಾರಿ ಬಗ್ಗೆ ಮಧ್ಯದಲ್ಲಿ ಎಲ್ಲೂ ಯಾರಿಗೂ ಕೇಳಿಲ್ಲ. ನಾವು ಚಡಚಣ ಬಿಟ್ಟ ನಂತರ ಮಧ್ಯದಲ್ಲಿ ನಮ್ಮ ಗಾಡಿಯಲ್ಲಿ ಬೇರೆ ಯಾರೂ ಹತ್ತಿಕೊಂಡಿಲ್ಲ.

8. ಆ ದಿನ ಕೃತ್ಯ ಸ್ಥಳಕ್ಕೆ ಹೋದ ನಂತರ ತೂಕ ಮಾಡುವ ಕಾಟಾ ತರಿಸಿದ್ದರು. ಠಾಣೆಯಿಂದ ತೂಕದ ಕಾಟಾ ತೆಗೆದುಕೊಂಡು ಹೋಗಿರಲಿಲ್ಲ. ಆ ದಿನ ಹೋಗಬೇಕಾದರೆ

ಫೋಟೋಗ್ರಾಫರ ಮಾತ್ರ ಕರೆದುಕೊಂಡು ಬಂದಿದ್ದರು ಆ ದಿನ ಫೋಟೋಗ್ರಾಫರನನ್ನು ಚಡಚಣದಿಂದ ಕರೆದುಕೊಂಡು ಬಂದಿದ್ದರು. ತೂಕ ಮಾಡುವರಾಗಲಿ, ಫೋಟೋ ತೆಗೆಯುವವರಾಗಲಿ ದಾರಿ ಮಧ್ಯದಿಂದ ಕರೆದುಕೊಂಡು ಹೋಗಿರುವುದಿಲ್ಲ. ಆ ದಿನ ಪಂಚನಾಮೆಯಲ್ಲಿ ತೂಕ ಮಾಡುವವರನ್ನು ಧುಮಕನಾಳ ಕ್ರಾಸದಿಂದ ಕರೆದುಕೊಂಡು ಹೋಗಲಾಗಿತ್ತು ಎಂದು ಬರೆಯಲಾಗಿದೆ. ನಾನು ಪಂಚನಾಮೆಗೆ ಸಹಿ ಮಾಡುವಾಗ ಅದನ್ನು ಓದಿದ್ದೇನೆ. ನಾನು ಪೋಲೀಸರಿಗೆ ಪಂಚನಾಮೆಯಲ್ಲಿ ಧುಮಕನಾಳ ಕ್ರಾಸದಿಂದ ಪಂಚರನ್ನು ಏಕೆ ಕರೆದುಕೊಂಡು ಹೋಗಲಾಗಿದೆ ಎಂದು ಬರೆದಿದೆ ಎಂದು ಕೇಳಿಲ್ಲ. ನನಗೆ ಮಾದಕ ಪದಾರ್ಥವನ್ನು ಎಲ್ಲಿಂದ ಎಲ್ಲಿ ಸಾಗಿಸಲಾಗಿದೆ ಎಂಬುವುದು ಹೇಳಿಲ್ಲ. ಗುನ್ನಾ ಸ್ಥಳದಲ್ಲಿ ಮಾದಕ ಪದಾರ್ಥ ಜೀಪಿನಲ್ಲಿ ಹೇರುತ್ತಿದ್ದಾರೆ ಎಂದು ಗೊತ್ತಾಯಿತು. ನಾವು ಸ್ಥಳದಲ್ಲಿ ಹೋದಾಗ ಪೋಲೀಸ ಸಿಬ್ಬಂದಿಯನ್ನು ನೋಡಿ ಆ ವಾಹನದಿಂದ ಮಾದಕ ಪದಾರ್ಥ ಇಳಿಸುತ್ತಿದ್ದರು. ನಾನು ಪೋಲಿಸರನ್ನು ನೋಡಿ ಆ ಜೀಪಿನಿಂದ ಮಾದಕ ವಸ್ತು ಇಳಿಸುತ್ತಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸ್ಥಳದಿಂದ ದೂರದಲ್ಲಿ ಮನೆಗಳಿವೆ. ಆ ಸ್ಥಳದಿಂದ ಸಮೀಪದಲ್ಲಿ ತೋಟ ಇದೆ. ಆ ದಿನ ಪೋಲೀಸರು ಸ್ಥಳಕ್ಕೆ ಹೋಗಬೇಕಾದರೆ ಲ್ಯಾಪಟಾಪ್ ಮತ್ತು ಪ್ರಿಂಟರ ತೆಗೆದುಕೊಂಡು ಬಂದಿದ್ದರು. ಆ ದಿನ ಅಲ್ಲಿ ಬ್ಯಾಟರಿ (ಟಾರ್ಚ) ಬಳಸಿ ಪಂಚನಾಮೆ ಮಾಡಿದರು. ನಿ.ಪಿ.3 ರಲ್ಲಿ ಲ್ಯಾಪಟಾಪ ಮತ್ತು

ಪ್ರಿಂಟರ ಕಾಣುತ್ತಿಲ್ಲವೆಂದರೆ ಸರಿ. ಆ ಸ್ಥಳದಲ್ಲಿಯೇ ಪಂಚನಾಮೆ ಪ್ರಿಂಟಗಳನ್ನು ತೆಗೆದರು. ಸ್ಯಾಂಪಲನ್ನು ಒಂದೇ ಬ್ಯಾಗಿನಿಂದ 500 ಗ್ರಾಂ ಸ್ಯಾಂಪಲ್ ತೆಗೆದರು.

9. ದಿನಾಂಕ 02.03.2018 ರಂದು ಚಾ.ಸಾ.1 ರವರು ಠಾಣೆಯಲ್ಲಿಯೇ ಇದ್ದು, ಸ್ಥಳಕ್ಕೆ ಬಂದಿರಲಿಲ್ಲವೆಂದರೆ ಸರಿಯಲ್ಲ. ದಿನಾಂಕ 02.03.2018 ರಂದು ಯಾವುದೇ ರೇಡ್ ಮಾಡಿಲ್ಲ ಹಾಗೂ ಯಾವುದೇ ಮಹಜರ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಚಡಚಣದಿಂದ ಸನ್ 2016 ರಿಂದ 2021 ರವರೆಗೆ ನೌಕರಿ ಮಾಡಿದ್ದೇನೆ. ಚಾ.ಸಾ.1 ರವರ ಮೇಲೆ ಫೇಕ್ ಎನಕೌಂಟರ ಮಾಡಿದ ಬಗ್ಗೆ ಕೇಸ್ ಇದೆ ಎಂದರೆ ಸರಿ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ಠಾಣೆಯಲ್ಲಿಯೇ ಪಂಚನಾಮೆ ಮೇಲೆ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ **02.03.2018** ರಂದು ನಾನು ನಮ್ಮ ಕಛೇರಿಯಲ್ಲಿದ್ದಾಗ ಸಂಜೆ **05.30** ಗಂಟೆಗೆ ಚಡಚಣ ಪೊಲೀಸರು ನಮ್ಮ ಕಛೇರಿಗೆ ಬಂದು ಪಿಎಸ್ಐರವರು ಕಛೇರಿಗೆ ಬರಬೇಕು ಅಂತಾ ಹೇಳಿದ್ದಾರೆ ಎಂದು ಒಂದು ಪತ್ರ ವನ್ನು ನನಗೆ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪತ್ರದಲ್ಲಿ ಧುಮಕನಾಳದಲ್ಲಿ ಅಫೀಮನ್ನು ಕಳ್ಳಸಾಗಾಣಿಕೆ ಮಾಡಲಾಗುತ್ತಿದೆ ಎಂದು ಬಾತ್ಮಿ ಬಂದಿದೆ, ಅದಕ್ಕೆ ನನ್ನನ್ನು ಪಂಚನಾಗಿ ಬರಬೇಕು ಎಂದು ಕೇಳಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೇರೆಗೆ ನಾನು ಚಡಚಣ ಪೊಲೀಸ ಠಾಣೆಗೆ ಹೋದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಚಡಚಣ ಪೊಲೀಸ ಠಾಣೆಯಿಂದ ಪೊಲೀಸರು ನನಗೆ ಅವರ ಇಲಾಖಾ ಜೀಪನಿಂದ ನನಗೆ, ಪಟ್ಟಣ ಪಂಚಾಯತಿ ಕ್ಲರ್ಕ, ಒಬ್ಬ ವೈದ್ಯರು ಹಾಗೂ ಪೊಲೀಸರು ಧುಮಕನಾಳಕ್ಕೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಧುಮಕನಾಳಕ್ಕೆ ಹೋದಾಗ ಸಮಯ ಸಂಜೆ **06-15** ಗಂಟೆಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆ ಊರಿನಲ್ಲಿ ಶಾಂತವೀರ ಎನ್ನುವವರ ಜಮೀನಿಗೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಮೀನದಲ್ಲಿ ಕ್ರೂಜರ ಜೀಪ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆ ಜೀಪಗೆ ಸುತ್ತುವರೆದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜೀಪನಲ್ಲಿ ಇಬ್ಬರು ಜನ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೈಕಿ ಆ ವ್ಯಕ್ತಿಗೆ ಪಿಎಸ್ಐ ರವರು ಹೆಸರು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೈಕಿ ಒಬ್ಬನು ತನ್ನ ಹೆಸರು ರಾಠೋಡ ಅಂತಾ ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ನೊಬ್ಬ ತನ್ನ ಹೆಸರು ಲಮಾಣಿ ಅಂತಾ ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವ್ಯಕ್ತಿಗಳು ಇದ್ದ ಜೀಪನಲ್ಲಿ **7** ಬ್ಯಾಗ ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಚೀಲಗಳನ್ನು ನೋಡಲಾಗಿ ಅದರಲ್ಲಿ ಗಸಗಸೆ ಪೌಡರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಆ ವ್ಯಕ್ತಿಗಳಿಗೆ

ಆ ಗಸಗಸೆ ಪೌಡರ ಏಕೆ ಜೀಪನಲ್ಲಿ ಇಟ್ಟುಕೊಂಡಿದ್ದೀರಿ ಎಂದು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಅವರು ಮಾರಾಟ ಮಾಡಲು ಸಾಗಿಸುತ್ತಿದ್ದೇವೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಆ ಇಬ್ಬರು ಜನರಿಗೆ ಗಸಗಸೆ ಪೌಡರ ಸಾಗಾಟ ಮಾಡಲು ಪರವಾನಗೇ ಇದೆಯಾ ಎಂದು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಆ ಇಬ್ಬರು ಪರವಾನಗೆ ಇರುವುದಿಲ್ಲ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು 7 ಬ್ಯಾಗಗಳನ್ನು ಆ ವ್ಯಕ್ತಿಗಳಿಗೆ ಜೀಪನಿಂದ ಕೆಳಗೆ ಇಳಿಸಿ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ತೂಕ ಮಾಡುವ ಕಾಟಾ ತೆಗೆದುಕೊಂಡು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಬ್ಯಾಟರಿ ಬೆಳಕಿನಲ್ಲಿ ಗಸಗಸೆ ಚೀಲಗಳನ್ನು ತೂಕ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೈಕಿ 1 ನೇ ಚೀಲ 23 ಕೆಜಿ 500 ಗ್ರಾಂ, 2 ನೇ ಚೀಲ 24 ಕೆ ಜಿ, 3 ನೇ ಚೀಲ 25 ಕೆಜಿ 250 ಗ್ರಾಂ, 4 ನೇ ಚೀಲ 25 ಕೆಜಿ, 5 ನೇ ಚೀಲ 25 ಕೆಜಿ, 6 ನೇ ಚೀಲ ಕೆಜಿ 9 ಕೆಜಿ ಹಾಗೂ 7 ನೇ ಚೀಲ 3 ಕೆಜಿ ಆದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ಲ್ಯಾಪಟಾಪನಲ್ಲಿ ಪಂಚನಾಮೆ ತಯಾರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ

ಪೊಲೀಸರು ನಮ್ಮನ್ನು ಜೀಪನ ಮುಂದೆ ನಿಲ್ಲಿಸಿ ಫೋಟೋ ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆ ಮೇಲೆ ನಮ್ಮ ರುಜು ಪಡೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೋಲೀಸರು ಗಸಗಸೆ ಪೌಡರ ತುಂಬಿದ್ದ 07 ಚೀಲಗಳನ್ನು ಮತ್ತು ಕೆ.ಎ.22/ಬಿ-4520 ಕ್ರೂಜರ ವಾಹನ ವಶಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಮೊದಲನೇ ಬ್ಯಾಗಿನಿಂದ 500 ಗ್ರಾಂ ಗಸಗಸೆ ಪೌಡರ ಸ್ಯಾಂಪಲ್ ಕುರಿತು ಪಡೆದುಕೊಂಡು ಪ್ಯಾಕ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ರಾತ್ರಿ 8.00 ಘಂಟೆಯವರೆಗೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-ಇಲ್ಲ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.